# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 300 |
| ಸದಸ್ಯರ ಹೆಸರು | : | ಡಾ॥ ಚಂದ್ರ ಶೇಖರ ಬಿ ಪಾಟೀಲ್ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 16-07-2019 |
| ಉತ್ತರಿಸುವ ಸಚಿವರು | : | ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು |

| ಪ್ರಶ್ನೆ | ಉತ್ತರ |
|---|---|
| (ಅ) ರಾಜ್ಯವ್ಯಾಪಿ ಹಲವು ಶಾಲೆಗಳಲ್ಲಿ ಶಿಕ್ಷಕರಿಗೆ ವೇತನ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ; | ಬಂದಿದೆ.<br>ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯ ಕೇಂದ್ರ ಸರ್ಕಾರ ಪ್ರಾಯೋಜಿತ ಸರ್ವ ಶಿಕ್ಷಣ ಅಭಿಯಾನ, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಯೋಜನೆಗಳಡಿ ನೇಮಕಗೊಂಡ ಶಿಕ್ಷಕರಿಗೆ ಕೆಲವು ಮಾಹೆಗಳ ವೇತನ ಪಾವತಿಯಲ್ಲಿ ವಿಳಂಬವಾಗಿರುವುದು ಗಮನಕ್ಕೆ ಬಂದಿರುತ್ತದೆ. ಈ ಯೋಜನೆಗಳು ಕೇಂದ್ರ ಪ್ರಾಯೋಜಿತ ಯೋಜನೆಗಳಾಗಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಪಾಲುದಾರಿಕೆ ಅನುದಾನ ಆಧರಿಸಿ ರಾಜ್ಯಸರ್ಕಾರದಿಂದ ಅನುದಾನ ಬಿಡುಗಡೆಮಾಡುತ್ತಿರುವುದರಿಂದ ಹಾಗೂ ರಾಜ್ಯದಲ್ಲಿ ಹೊಸದಾಗಿ ಜಾರಿಗೆ ತಂದಿರುವ ಖಜಾನೆ-2 ತಂತ್ರಾಂಶದ ಅನುಷ್ಠಾನದಲ್ಲಿ ಕಾಣಿಸಿದ ತಾಂತ್ರಿಕ/ಆಡಳಿತಾತ್ಮಕ ಸಮಸ್ಯೆಗಳಿಂದಾಗಿ ಸಹ ಆಗಾಗ್ಗೆ ವಿಳಂಬದ ಪ್ರಕರಣಗಳು ವರದಿಯಾಗಿವೆ. ಶಿಕ್ಷಕರ ವೇತನವನ್ನು ಸಕಾಲದಲ್ಲಿ ಪಾವತಿಸುವಂತೆ ಅಧೀನ ಕಚೇರಿಗಳಿಗೆ ಕಾಲಕಾಲಕ್ಕೆ ಸುತ್ತೋಲೆ ಹೊರಡಿಸಿ, ಸೂಕ್ತ ನಿರ್ದೇಶನ ನೀಡಲಾಗಿದೆ. ಜೊತೆಗೆ ಆರ್ಥಿಕ ಇಲಾಖೆಯೊಡನೆ ಸಮನ್ವಯ ಸಾಧಿಸಿ ಅಡೆತಡೆಗಳನ್ನು ನಿವಾರಣೆ ಮಾಡಲಾಗಿದೆ. |
| (ಆ) ಶಿಕ್ಷಕರ ವೇತನ ಸೆಳೆಯಲು ಇರುವ ಲೆಕ್ಕ ಶೀರ್ಷಿಕೆಗಳು ಹಲವಾರು ಇದ್ದು, ಇದರಿಂದ ಸಕಾಲಕ್ಕೆ ವೇತನ ಬಿಡುಗಡೆಗೊಳಿಸುವಲ್ಲಿ ಮತ್ತು ಹಂಚಿಕೆ ಮಾಡುವಲ್ಲಿ ಗೊಂದಲಗಳು ಉಂಟಾಗುತ್ತಿವೆ ಇದನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; | ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯಡಿ ಕೇಂದ್ರ ಸರ್ಕಾರ ಪ್ರಾಯೋಜಿತ ಸರ್ವ ಶಿಕ್ಷಣ ಅಭಿಯಾನ, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಹಾಗೂ ಇನ್ನಿತರ ರಾಜ್ಯ ವಲಯದ ಯೋಜನೆಗಳಡಿಯಲ್ಲಿ ಶಿಕ್ಷಕರು ನೇಮಕವಾಗಿದ್ದು, ಆಯಾ ಯೋಜನೆಗೆ ಸಂಬಂಧಿಸಿದ ಲೆಕ್ಕ ಶೀರ್ಷಿಕೆಗಳಡಿಯಲ್ಲಿಯೇ ವೇತನ ಪಾವತಿಗೆ ಅನುದಾನ ಹಂಚಿಕೆ ಮಾಡಲಾಗುತ್ತಿದೆ. ಆಯವ್ಯಯದಲ್ಲಿ ತಾಲ್ಲೂಕುವಾರು ಅನುದಾನ ಹಂಚಿಕೆಯಾದ ನಂತರ ಕೆಲವೊಮ್ಮೆ |

| | |
|---|---|
| | ಶಿಕ್ಷಕರ ವರ್ಗಾವಣೆ, ಹೊಸ ಶಿಕ್ಷಕರ ನೇಮಕಾತಿ ಕಾರಣಗಳಿಂದಾ ಕೆಲವು ತಾಲ್ಲೂಕುಗಳಲ್ಲಿ ವೇತನ ಪಾವತಿಗೆ ಅನುದಾನ ಕೊರತೆಯಾಗುತ್ತಿದ್ದು, ಆಯವ್ಯಯದಲ್ಲಿ ಲಭ್ಯವಿರುವ ಅನುದಾನದ ಅಂಕಿ-ಅಂಶಗಳನ್ನು ಮಾರ್ಪಡಿಸಲು, ಆರ್ಥಿಕ ಇಲಾಖೆಯ ಸಮನ್ವಯದೊಂದಿಗೆ ಈ ಸಮಸ್ಯೆಗಳನ್ನು ಪರಿಹರಿಸಲು ಕ್ರಮವಹಿಸಲಾಗುತ್ತಿದೆ. |
| (ಇ) ಶಿಕ್ಷಕರ ವೇತನ ಸೆಳೆಯಲು ಇರುವ ಹಲವು ಲೆಕ್ಕ ಶೀರ್ಷಿಕೆಗಳನ್ನು ವಿಲೀನ ಮಾಡಿ ಒಂದೆ ಲೆಕ್ಕ ಶೀರ್ಷಿಕೆಯಲ್ಲಿ ವೇತನ ಸೆಳೆಯಲು ಇರುವ ತೊಂದರೆಗಳೇನು? (ಸಂಪೂರ್ಣ ವಿವರ ನೀಡುವುದು) | ಈಗಾಗಲೇ ಸರ್ವ ಶಿಕ್ಷಣ ಅಭಿಯಾನ ಮತ್ತು ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಸಮಿತಿಗಳನ್ನು ವಿಲೀನಗೊಳಿಸಿ, ಸಮಗ್ರ ಶಿಕ್ಷಣ ಕರ್ನಾಟಕ ಸಮಿತಿ ರಚಿಸಿದ್ದು, ಈ ಯೋಜನೆಯಡಿ ಶಿಕ್ಷಕರ ವೇತನ ಸೆಳೆಯಲು ಇರುವ ಹಲವು ಲೆಕ್ಕ ಶೀರ್ಷಿಕೆಗಳನ್ನು ಒಗ್ಗೂಡಿಸುವ ಬಗ್ಗೆ ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲಾಗುತ್ತಿದೆ. |

**ಸಂಖ್ಯೆ: ಇಪಿ 56 ವೈವ್ಯಕೆ 2019**

**(ಎಸ್.ಆರ್. ಶ್ರೀನಿವಾಸ್)**

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

| | | | | | | | | | | |
|---|---|---|---|---|---|---|---|---|---|---|
| 173 | Ranebennur | 1750 | 1749 | **3499** | 28 | 57 | 85 | 1778 | 1806 | **3584** |
| 174 | Savanur | 988 | 984 | **1972** | 14 | 43 | 57 | 1002 | 1027 | **2029** |
| 175 | Shiggaon | 1085 | 1236 | **2321** | 24 | 14 | 38 | 1109 | 1250 | **2359** |
| **Haveri** | | **9435** | **9752** | **19187** | **232** | **450** | **682** | **9667** | **10202** | **19869** |
| 176 | Gangavathi | 2517 | 2662 | **5179** | 74 | 127 | 201 | 2591 | 2789 | **5380** |
| 177 | Koppal | 2115 | 2532 | **4647** | 42 | 149 | 191 | 2157 | 2681 | **4838** |
| 178 | Kushtagi | 1719 | 1829 | **3548** | 31 | 150 | 181 | 1750 | 1979 | **3729** |
| 179 | Yelburga | 1705 | 1813 | **3518** | 76 | 202 | 278 | 1781 | 2015 | **3796** |
| **Koppal** | | **8056** | **8836** | **16892** | **223** | **628** | **851** | **8279** | **9464** | **17743** |
| 180 | Athani | 2261 | 2354 | **4615** | **44** | **100** | 144 | 2305 | 2454 | **4759** |
| 181 | Chikodi | 1996 | 2118 | **4114** | **32** | **158** | 190 | 2028 | 2276 | **4304** |
| 182 | Gokak | 1760 | 1789 | **3549** | **13** | **99** | 112 | 1773 | 1888 | **3661** |
| 183 | Hukkeri | 2566 | 2771 | **5337** | **16** | **97** | 113 | 2582 | 2868 | **5450** |
| 184 | Kagawada | 818 | 1002 | **1820** | 0 | 0 | 0 | 818 | 1002 | **1820** |
| 185 | Mudalagi | 2697 | 2792 | **5489** | 0 | 0 | 0 | 2697 | 2792 | **5489** |
| 186 | Nippani | 1660 | 1723 | **3383** | 0 | 0 | 0 | 1660 | 1723 | **3383** |
| 187 | Rayabhag | 2608 | 2621 | **5229** | **20** | **42** | 62 | 2628 | 2663 | **5291** |
| **Chikodi** | | **16366** | **17170** | **33536** | **125** | **496** | **621** | **16491** | **17666** | **34157** |
| 188 | Devadurga | 1578 | 1826 | **3404** | 67 | 175 | 242 | 1645 | 2001 | **3646** |
| 189 | Lingasugur | 2256 | 2409 | **4665** | 46 | 283 | 329 | 2302 | 2692 | **4994** |
| 190 | Manvi | 2199 | 2198 | **4397** | 32 | 83 | 115 | 2231 | 2281 | **4512** |
| 191 | Raichur | 2764 | 2845 | **5609** | 43 | 122 | 165 | 2807 | 2967 | **5774** |
| 192 | Sidhanur | 2458 | 2237 | **4695** | 38 | 87 | 125 | 2496 | 2324 | **4820** |
| **Raichur** | | **11255** | **11515** | **22770** | **226** | **750** | **976** | **11481** | **12265** | **23746** |
| 193 | Shahapura | 2170 | 2432 | **4602** | **8** | **67** | 75 | 2178 | 2499 | **4677** |
| 194 | Shorapur | 2341 | 2532 | **4873** | **5** | **37** | 42 | 2346 | 2569 | **4915** |
| 195 | Yadgir | 2270 | 2696 | **4966** | **42** | **149** | 191 | 2312 | 2845 | **5157** |
| **Yadgir** | | **6781** | **7660** | **14441** | **55** | **253** | **308** | **6836** | **7913** | **14749** |
| | **Grand Total** | **233773** | **242685** | **476458** | **3992** | **11256** | **15248** | **237765** | **253941** | **491706** |

ನಿರ್ದೇಶಕರು (ಪ್ರೌಢ ಶಿಕ್ಷಣ)

ಸಾರ್ವಜನಿಕ ಶಿಕ್ಷಣ ಇಲಾಖೆ